UASB Library
Newspaper Clippings
Tuesday 17-09-2024
Pg .1
Jai Kisan

ಅಡಕೆ ಸಿಪ್ಪೆಯ ಸಾಬೂನಿಗೆ ಪೇಟೆಂಟ್

ವೈನ್, ಬಣ್ಣ, ಸಿರಪ್, ಗಾಜು ಮೊದಲಾದ ಅಡಕೆ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಲಭ್ಯ

ಬೆಂಗಳೂರು: ಅಡಕೆ ಧಾರಣೆ ಮತ್ತು ಮಾರುಕಟ್ಟೆ ಹಾಗೂ ಅಡಕೆ ಕ್ಯಾನರ್‌ಕಾರಕ ಎನ್ನುವ ವ್ಯಾಜ್ಯ ಸುಪ್ರೀಂ ಕೋರ್ಟ್‌ನಲ್ಲಿರುವ ಆತಂಕದ ಮಧ್ಯೆ ಬೆಳೆಗಾರರಿಗೆ ಸತ್ವ ನೀಡುವ ಸುದ್ದಿಯೊಂದಿದೆ. ಅಡಕೆ ಸಿಪ್ಪೆಯಿಂದ ತಯಾರಿಸಿದ ಕೊಕೋ ಸ್ನಾನದ ಸಾಬೂನಿಗೆ ಭಾರತ ಸರ್ಕಾರದಿಂದ ಪೇಟೆಂಟ್ (ಹಕ್ಕುಸ್ವಾಮ್ಯ) ಲಭಿಸಿದೆ.

ಅಡಕೆ ಕ್ಯಾನರ್‌ಕಾರಕ ಆಲ್ಕ ಅಡಕೆಯಿಂದ ಕ್ಯಾನರ್ ನಿರ್ಮಾಣಕ್ಕೆ ಔಷಧಿಗಳನ್ನು ತಯಾರಿಸಲು ಸಾಧ್ಯವಿದೆ ಎಂಬುದು ಸಂಶೋಧನೆಯಿಂದ ತಿಳಿದು ಬಂದಿದೆ. ಆಲ್ಕದೆ, ಅಡಕೆಯಿಂದ ತಯಾರಿಸಿದ ಸಾಬೂನು, ವೈನ್, ಬಣ್ಣ, ಸಿರಪ್, ಗಾಜು ಮೊದಲಾದ ಉತ್ಪನ್ನಗಳು ಈಗಾಗಲೇ ಮಾರುಕಟ್ಟೆಯಲ್ಲಿವೆ. ಈಗ ಸ್ನಾನದ ಸಾಬೂನಿಗೆ ಪೇಟೆಂಟ್ ದೊರೆತಿರುವುದು ಆಕಾದಾಯಕ ಬೆಳವಣಿಗೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಸಮೀಪದ ಕಬಿಲದಲ್ಲಿರುವ ಹಾರ್ಡಿಕ್ ಹರ್ಬಲ್ಸ್ ಸಹ್ಯಮ್ ಬ್ರಾಂಡ್‌ನ ಮೂಲಕ ಸಹ್ಯಮ್ ಕೊಕೋ ಸ್ನಾನ - ಹರ್ಬಲ್ ಬಾಥಿಂಗ್ ಸೋಪ್ ತಯಾರಿಸಲಾಗುತ್ತದೆ. 2021ರ ನವೆಂಬರ್‌ನಲ್ಲಿ ಪೇಟೆಂಟ್‌ಗೆ ಅರ್ಜಿ ಸಲ್ಲಿಸಲಾಗಿತ್ತು. ಈ ಪ್ರಕ್ರಿಯೆಯು ಆರೇಳ ಹಂತಗಳನ್ನು ದಾಟಿ, ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ಅನುಮೋದನೆ ಪಡೆದಿದೆ. ಕೇಂದ್ರ



ಸರ್ಕಾರದಿಂದ ನ.13ರಂದು ಅಧಿಕೃತವಾಗಿ ಪೇಟೆಂಟ್ ಪಡೆದುಕೊಂಡಿದೆ. ಇದರೊಂದಿಗೆ ಈ ವಿಶೇಷ ಉತ್ಪನ್ನದ ಹಕ್ಕುಸ್ವಾಮ್ಯವನ್ನು ಮುಂದಿನ 20 ವರ್ಷಗಳಿಗೆ ಹಾರ್ಡಿಕ್ ಹರ್ಬಲ್ಸ್ ಕಾಯ್ದಿರಿಸಿಕೊಂಡಿದೆ.

ಅಡಕೆ ಸಿಪ್ಪೆಯಲ್ಲಿದೆ ಔಷಧೀಯ ಗುಣ: ಅಡಕೆ ಹಣ್ಣಿನ ಸಿಪ್ಪೆಯ ರಸ, ತೆಂಗಿನ ಎಣ್ಣೆ ಅಲೋವೆರಾ, ಸಾಗುವಾನಿ ಎಲೆ, ಅರಿಶಿನ ಎಣ್ಣೆ, ಕುಂತಬುರಿ ಮತ್ತು ಲಾವಂಚದಂತಹ ಪ್ರಬಲ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಈ ಸಾಬೂನು ತ್ವಚೆಯ ರಕ್ಷಣೆ ಮಾಡಲಿದೆ. ತ್ವಚೆ ಬಲಪಡಿಸಿ, ಸುಕ್ಕುಗಳನ್ನು ಕಡಿಮೆ ಮಾಡುವ ಮತ್ತು ಮಾಯಿಶ್ಚರೈಸರ್ ಆಗಿ ಕಾರ್ಯನಿರ್ವಹಿಸಲಿದೆ. ಇದು ಸ್ಕಿನ್ ಸ್ಯಾಚ್ ಅಥವಾ ಬಿಳಿ ಮಚ್ಚೆ (ಸಿಬ್ಬ) ನಿವಾರಣೆಗೆ ಸಹಾಯ ಮಾಡುತ್ತದೆ. ತುರಿಕೆ ನಿವಾರಿಸಿ, ಗಾಯಗಳನ್ನು ತ್ವರಿತವಾಗಿ ಗುಣಪಡಿಸುತ್ತದೆ. ಈ ಉತ್ಪನ್ನವು ಚರ್ಮದ ಆರೋಗ್ಯ ವೃದ್ಧಿಸುವುದು ಮಾತ್ರವಲ್ಲದೆ ಸುಸ್ಥಿರತೆ ಕಾಯ್ದುಕೊಳ್ಳಲು ನೆರವಾಗುತ್ತದೆ.

ಸ್ಥಳೀಯ ಮೂಲದ ನೈಸರ್ಗಿಕ ಕೃಷಿ ಔಷಧಿಯ ಪದಾರ್ಥಗಳ ಉತ್ಪಾದನೆ ಹಾಗೂ ಬಳಕೆಯನ್ನು ಪ್ರೋತ್ಸಾಹಿಸುವ ಜೊತೆಗೆ ವೇಟೆಂಟ್ ನಿಂದ ವೈಜ್ಞಾನಿಕವಾಗಿ ಔಷಧೀಯ ಗುಣಗಳು ಸಾಬೀತಾಗಿವೆ. ಇದರಿಂದ ಅಡಕೆ ಕೃಷಿಯ ಮೌಲ್ಯ ವರ್ಧನೆ ಹಾಗೂ ಅಡಕೆಯಲ್ಲಿರುವ ಔಷಧೀಯ ಗುಣಗಳನ್ನು ಪ್ರಚುರಪಡಿಸಿದಂತಾಗಿದೆ.

ಕರಾವಳಿ ಮತ್ತು ಮಲೆನಾಡಿಗೆ ಸೀಮಿತವಾಗಿದ್ದ ಅಡಕೆ ಬೆಳೆ ಇತ್ತೀಚಿನ ದಿನಗಳಲ್ಲಿ ಬಯಲುಸೀಮೆಗೂ ವಿಸ್ತರಿಸಿದೆ. ಹೀಗಾಗಿ ಅಡಕೆ ಬೆಳೆಯು ಈಗ ಕರ್ನಾಟಕದ ಬಹು ಪಾಲು ಪ್ರದೇಶ ವ್ಯಾಪಿಸಿದೆ. ಅಡಕೆಯು ಮೇಲಿನ ಅಪವಾದವನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಅಡಕೆಯಿಂದ ಹೊಸ ಹೊಸ ಉತ್ಪನ್ನಗಳನ್ನು ತಯಾರಿಸುವ ಆವಿಷ್ಕಾರಗಳು ನಡೆಯುತ್ತಿವೆ.

> ಕೇಂದ್ರ ಸರ್ಕಾರದಿಂದ ಪೇಟೆಂಟ್ ಲಭಿಸಿರುವುದು ನಮ್ಮ ಸಂತೋಷಕ್ಕೆ ಇನ್ನಷ್ಟು ಉತ್ತೇಜನ ನೀಡಿದೆ. ಮತ್ತಷ್ಟು ನಾವು ಸಣ್ಣವರಿದ್ದಾಗ ಬೆಳೆ ಮಚ್ಚೆಯಾದಾಗ ಹಣ್ಣಾದ ಅಡಕೆ ಸಿಪ್ಪೆ ಉಜ್ಜುತ್ತಿದ್ದರು. ಒಂದರಲ್ಲಿ ದಿನದಲ್ಲಿ ಅದು ವಾಸಿಯಾಗುತ್ತಿತ್ತು. ಅದನ್ನೇ ಇಟ್ಟುಕೊಂಡು ನಾವು ಅಡಕೆ ಸಿಪ್ಪೆಯ ರಸ ತೆಗೆದು ಸಾಬೂನು ತಯಾರಿಸಿದ್ದೇವೆ.
> ■ ಮುರಳೀಧರ ಕೆ., ಅಡಕೆ ಸಿಪ್ಪೆ ಸಾಬೂನು ತಯಾರಕ



ಅಡಕೆಯ ಪರ್ಯಾಯ ಉತ್ಪನ್ನಗಳು

ಅಡಕೆ ಜೊಗರು (ಟ್ಯಾನಿನ್) ಉಳ್ಳ ಬೀಜ. ಅಡಕೆಯನ್ನು ತಿಂದು ಉಗುಳುವ ಉದ್ದೇಶಕ್ಕೇ ಹುಟ್ಟಾ ಬಳಸಲಾಗುತ್ತದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಅಡಕೆ ಬೆಳೆಯ ವಿಸ್ತರಣೆಯಾಗುತ್ತಿದ್ದಂತೆ ಪರ್ಯಾಯ ಉತ್ಪನ್ನಗಳತ್ತ ಬೆಳೆಗಾರರು ಚಿತ್ತ ಹರಿಸಿದ್ದಾರೆ. ಆಡಕೆಯಿಂದ ಬ್ಯಾಗ್, ಚಾಕೋಲೆಟ್, ಚಟ್ನಿ, ಗಾಜು ಇತ್ಯಾದಿಗಳನ್ನು ಉತ್ಪಾದಿಸುವ ಪ್ರಯತ್ನಗಳು ನಡೆದಿವೆ. ಆನೇಕ ಉತ್ಪನ್ನಗಳು ಈಗ ಮಾರುಕಟ್ಟೆಯಲ್ಲಿವೆ. ಅಡಿಕೆಯ ಬಹು ಉಪ ಯೋಗಿ ಮರುಗಳನ್ನು, ಔಷಧಗಳನ್ನು ಅಡಿಕೆ ಬಣ್ಣವನ್ನು ವಿವಿಧತೆ ಉಪಯೋಗ ಮಾಡಲಾಗುತ್ತಿದೆ. ಆಡಕೆಯ ಹಾಳೆಯಿಂದ ತಟ್ಟೆ ಮಾಡುವ ಉದ್ಯಮ ವ್ಯಾಪಕವಾಗಿ ಬೆಳೆದಿದೆ. ಇನೀಗ ಸಾಬೂನು ತಯಾರಿ, ಆಡಕೆ ಬೆಳೆಗೆ ಇನ್ನಷ್ಟು ಉತ್ತೇಜನ ನೀಡುವ ನಿರೀಕ್ಷೆಯಿದೆ.

17-09-2024
Hosa Digantha Pg.03

ಮೈಸೂರು ಮಲ್ಲಿಗೆ ಬ್ರಾಂಡಿಂಗ್‌ಗೆ ವಿಶೇಷ ತರಬೇತಿ!


ನಂಜನಗೂಡು ಬಾಳೆ, ಕೊಡಗಿನ ಕಿತ್ತಳೆ ಸಹಿತ 48 ವಸ್ತುಗಳ ಮೌಲ್ಯವರ್ಧನೆಗೆ ಕ್ರಮ । ವಿದೇಶಿ ಮಾರುಕಟ್ಟೆಯಲ್ಲಿ ಮಾರುವ ಉದ್ದೇಶ

■ ಆರ್.ವೀರೇಂದ್ರ ಪ್ರಸಾದ್

ಉದಯವಾಣಿ ಸಮಾಚಾರ

ಮೈಸೂರು: ಭೌಗೋಳಿಕ ಸೂಚ್ಯಂಕ (ಜಿಯೋಗ್ರಾಫಿಕಲ್ ಇಂಡಿಕೇಷನ್) ವಸ್ತುಗಳು ಹಾಗೂ ಪದಾರ್ಥಗಳ ಮೌಲ್ಯವರ್ಧನೆ ಮಾಡುವುದಕ್ಕೆ ತರಬೇತಿ ನೀಡಲು ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯು ಯೋಜನೆಯೊಂದನ್ನು ಸಿದ್ಧಪಡಿಸಿಕೊಂಡಿದೆ.

ಕರ್ನಾಟಕದಲ್ಲಿ ಈಗಾಗಲೇ ವ್ಯಪಸಾಯ ಹಾಗೂ ಕರಕುಶಲ ಕ್ಷೇತ್ರದಲ್ಲಿ ಒಟ್ಟು 48 ಪದಾರ್ಥಗಳು ಜಿಯೋಗ್ರಾಫಿಕಲ್ ಇಂಡಿಕೇಷನ್ ಆಗಿ ಅಧಿಕೃತವಾಗಿ ನೋಂದಣಿಯಾಗಿವೆ. ಮೈಸೂರು ಮಲ್ಲಿಗೆ, ನಂಜನಗೂಡು ರಸಬಾಳೆ, ಕೊಡಗಿನ ಕಿತ್ತಳೆ, ಉಡುಪಿಯ ಮಲ್ಲಿಗೆ, ಬದನೆ ಕಲೆ, ನವಲಗುಂದ ದರಿ ಮುಂತಾದವು ಇದರಲ್ಲಿ ಇವೆ. ಈ ಗುರುತಿಸಿರುವ ವಸ್ತುಗಳು ಆ ಸ್ಥಳವನ್ನು ಬಿಟ್ಟು ಬೇರೆ ಯಾವ ಕಡೆಯಲ್ಲೂ ಬೆಳೆಯುವುದಕ್ಕೆ ಆಗುವುದಿಲ್ಲ ಹಾಗೂ ಅಲ್ಲಿನ ಕುಶಲಕರ್ಮಿಗಳನ್ನು ಬಿಟ್ಟು ಇನ್ಯಾರಿಗೂ ತಯಾರು ಮಾಡಲು ಆಗುವುದಿಲ್ಲ ಎನ್ನುವ ಕಾರಣಕ್ಕೆ ಇವು ಬಹಳ ಮೌಲ್ಯವನ್ನು ಪಡೆದುಕೊಂಡಿವೆ. ಇದರಿಂದಾಗಿ ಇವುಗಳಿಗೆ ಬೇಡಿಕೆ ಇದೆ. ಆದರೆ, ಇವುಗಳನ್ನು ಮಾರಾಟ ಮಾಡುವವರಿಗೆ ಸರಿಯಾದ ಮಾರುಕಟ್ಟೆ ಜ್ಞಾನವಿಲ್ಲದೆ ಇರುವುದರಿಂದ ವಸ್ತುವಿನ



> ಜಿಐ ಬೆಳೆ ಬೆಳೆಯುವವರಿಗೆ ಹಾಗೂ ಕುಶಲ ಕಲೆಗಾರರಿಗೆ ತರಬೇತಿ ನೀಡುವ ಯೋಜನೆಯನ್ನು ಸಿದ್ಧಪಡಿಸಲಾಗಿದ್ದು, ರೂಪರೇಷೆಗಳು ಅಂತಿಮ ಗೊಂಡಿವೆ. ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದ್ದು, ಅಲ್ಲಿಂದ ಅನುಮತಿ ದೊರಕುತ್ತಿದ್ದಂತೆ ಕಾರ್ಯ ಪ್ರಾರಂಭಿಸಲಾಗುತ್ತದೆ.
> ● ಡಾ.ಯು.ಟಿ.ವಿಜಯ್, ಕಾರ್ಯನಿರ್ವಾಹಕ ಕಾರ್ಯದರ್ಶಿ, ಕೆಎಸ್‌ಎಸ್‌ಟಿ

ಮೌಲ್ಯಕ್ಕೆ ತಕ್ಕಂತೆ ವರಮಾನ ಸಿಗುತ್ತಿಲ್ಲ. ಆದ್ದರಿಂದ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯು ಮೌಲ್ಯವರ್ಧನೆ ಮಾಡಲು ಈ ಪದಾರ್ಥಗಳನ್ನು ಬೆಳೆಯುವ ಹಾಗೂ ತಯಾರು ಮಾಡುವವರಿಗೆ ತರಬೇತಿ ನೀಡಲು ಯೋಜನೆಯನ್ನು ಹಾಕಿಕೊಂಡಿದೆ.

ತರಬೇತಿ ಹೇಗೆ?: ಜಿಯೋಗ್ರಾಫಿಕಲ್ ಇಂಡಿಕೇಷನ್ ವಸ್ತುಗಳಲ್ಲಿ ಕೆಲವೊಂದು ಬೇಗನೆ ನಾಶವಾಗುವ, ಕೊಳೆತು ಹೋಗುವ ಅಥವಾ ಒಣಗಿ ಹೋಗುವ ಗುಣವನ್ನು ಹೊಂದಿವೆ. ಉದಾಹರಣೆಗೆ ಉಡುಪಿ ಮಲ್ಲಿಗೆ, ಮೈಸೂರು ಮಲ್ಲಿಗೆ, ಕೊಡಗಿನ ಕಿತ್ತಳೆ, ಉಡುಪಿಯ ಮುಟ್ಟುಗುಳ್ಳ ಬದನೆ ಸೇರಿ ಇನ್ನು ಅನೇಕ ಪದಾರ್ಥಗಳು ಇವೆ. ಇವುಗಳನ್ನು ಬೆಳೆಯುವವರು ಹಾಗೂ ಮಾರಾಟ ಮಾಡುವವರು ದೀರ್ಘಕಾಲದವರೆಗೆ ಇಟ್ಟುಕೊಳ್ಳಲು ಆಗುವುದಿಲ್ಲ. ಆಲ್ಲದೆ, ಸರಿಯಾದ ರೀತಿಯಲ್ಲಿ ಪ್ಯಾಕ್ ಮಾಡಿ, ಮಾರಾಟ ಮಾಡದ ಕಾರಣ ಸರಿಯಾದ ಬೆಲೆ ಸಿಗುತ್ತಿಲ್ಲ. ಇದರಿಂದಾಗಿ ನಿರಾಸೆಗೊಂಡು ಬೆಳೆಯುವ ಪ್ರವೃತ್ತಿದ ವಿಶ್ಲೇಷಣೆಯನ್ನು ಕಡಿಮೆಯಾಗುತ್ತಾ ಬರುತ್ತದೆ. ಆದ್ದರಿಂದ ಇವುಗಳನ್ನು ಕಲ ದಿನಗಳವರೆಗೆ ಇಟ್ಟು ಮಾರಾಟ ಮಾಡುವ ಹಾಗೂ ಅಂತಾರಾಷ್ಟ್ರೀಯ ಮಾರುಕಟ್ಟೆ ಮತ್ತು ಆನ್‌ಲೈನ್ ಮಾರುಕಟ್ಟೆಯಲ್ಲಿ ಹೇಗೆ ಮಾರಾಟ ಮಾಡಬಹುದು ಎನ್ನುವುದರ ಬಗ್ಗೆ ತರಬೇತಿ ನೀಡಲಾಗುತ್ತದೆ.

ಉದಾಹರಣೆಗೆ ಮಲ್ಲಿಗೆ ಹೂವನ್ನು ಯಾವ ರೀತಿ ಒಣಗಿ ಹೋಗದಂತೆ ಪ್ಯಾಕ್ ಮಾಡಬೇಕು? ಆ ಪ್ಯಾಕಿಗೆ ಜಿಪ ಟ್ಯಾಗ್ ಹೇಗೆ ಅಳವಡಿಸಬೇಕು? ಮಾರುಕಟ್ಟೆಯನ್ನು ಹೇಗೆ ಸಂಪರ್ಕಿಸಬೇಕು? ಆನ್‌ಲೈನ್ ಮಾರುಕಟ್ಟೆಯ ಪರಿಕಲ್ಪನೆ ಕುರಿತು ಸುರಿತ ಸಂಜನ್ನೂಲ ವ್ಯಕ್ತಿಗಳು ತರಬೇತಿ ನೀಡುತ್ತಾರೆ. ಇದೇ ರೀತಿ ಕಿತ್ತಳೆ ಕಲೆ, ಬದರಿ ಕಲೆ, ನವಲಗುಂದದ ದರಿ (ಜಾಪ) ಇಂತಹ ಕಲೆಗಳನ್ನು ಮುಂದಿನ ಪೀಳಿಗೆಯೂ ಮುಂದುವರಿಸಿಕೊಂಡು ಹೋಗುವಂತೆ ಮಾಡಲು ತರಬೇತಿ ಕೊಡಲಾಗುತ್ತದೆ. ಆಲ್ಲದೆ ಮಾರುಕಟ್ಟೆಯಲ್ಲಿ ಮೌಲ್ಯವರ್ಧನೆ ಮಾಡಲು ಸೂಕ್ಷ್ಮ ಸಲಹೆಗಳನ್ನು ನೀಡಲಾಗುತ್ತದೆ.

ಜಿಐ ಬೆಳೆಗಳನ್ನು ಬೆಳೆಯುವವರು ಹಾಗೂ ಮಾರಾಟ ಮಾಡುವವರು ಗುಂಪುಗಳನ್ನು ಸ್ಥಾಪನೆ ಮಾಡಿಕೊಂಡಿರುತ್ತಾರೆ. ಕಿತ್ತನೆ ಕಲೆಯವರೂ ಕೂಡಾ ಸಂಘಗಳನ್ನು ಕಟ್ಟಿಕೊಂಡಿರುತ್ತಾರೆ. ಇಂಥವರ ಸಂಪರ್ಕ, ಆಲ್ಲಿ ಇರುವ ಸವಕ್ಕಿಗೆ ತರಬೇತಿ ನೀಡಲಾಗುತ್ತದೆ. ಜಿಕೆಗೆ ಇಲಾಖೆಗಳ ಜಿಲ್ಲಾ-ತಾಲೂಕು ಮಟ್ಟದ ಅಭಿವೃದ್ಧಿ ಮಾಹಿತಿ ಪಡೆದು ಸಂಪರ್ಕಿಸಿ ತರಬೇತಿ ನೀಡಲಾಗುತ್ತದೆ.

17-09-2024
Udayavani Pg.06

ರೈತ ಕರೆ ಕೇಂದ್ರಕ್ಕೆ ಎ.ಐ ಸ್ಪರ್ಶ

ಯಾಂತ್ರಿಕ ಬುದ್ಧಿಮತ್ತೆ, ಮಷಿನ್ ಲರ್ನಿಂಗ್ ಲಾಂಗ್ವೇಜ್ ಬಳಸಿ ತ್ವರಿತ ಪರಿಹಾರ ನೀಡುವ ಆಶಯ

● ಗಾಣಧಾಳು ಶ್ರೀಕಂಠ

ಬೆಂಗಳೂರು: ರೈತರ ಕುಂದು ಕೊರತೆಗಳನ್ನು ಆಲಿಸಿ ಪರಿಹಾರ ನೀಡುವುದಕ್ಕಾಗಿ ಆರಂಭಿಸಿರುವ 'ರೈತ ಕರೆ' ಕೇಂದ್ರವನ್ನು ಯಾಂತ್ರಿಕ ಬುದ್ಧಿಮತ್ತೆ (ಎಐ), ಮಷಿನ್ ಲರ್ನಿಂಗ್ ಲಾಂಗ್ವೇಜ್‌ನಂಥ ಆಧುನಿಕ ತಂತ್ರಜ್ಞಾನ ಗಳೊಂದಿಗೆ ಉನ್ನತೀಕರಿಸಲು ಕೃಷಿ ಇಲಾಖೆ ಸಿದ್ಧತೆ ನಡೆಸಿದೆ.

ರೈತರು ಎದುರಿಸುತ್ತಿರುವ ಸಮಸ್ಯೆಗಳಿಗೆ ಈ ಕೇಂದ್ರದ ಮೂಲಕ ತ್ವರಿತ ಹಾಗೂ ಪರಿಣಾಮಕಾರಿ ಪರಿಹಾರ ಒದಗಿಸುವುದು ಇಲಾಖೆಯ ಆಶಯ.

ಇಲ್ಲಿನ ಕೃಷಿ ಆಯುಕ್ತಾಲಯ-ದಲ್ಲಿರುವ 'ರೈತ ಕರೆ ಕೇಂದ್ರ' ಸಿತ್ಯ 11 ತಾಸು(ಬೆಳಿಗ್ಗೆ 8 ರಿಂದ ಸಂಜೆ 7ರವರೆಗೆ) ಕಾರ್ಯನಿರ್ವಹಿಸುತ್ತಿದೆ. 12 ಸಿಬ್ಬಂದಿ ಇದ್ದಾರೆ. 14 ದೂರವಾಣಿ ಮೂಲಕ ಬರುವ ರೈತರ ಕರೆಗಳಿಗೆ ಉತ್ತರಿಸುತ್ತಿದ್ದಾರೆ. ರಾಜ್ಯದ ವಿವಿಧೆಡೆಯಿಂದ ಸಿತ್ಯ 450 ಕರೆಗಳು ಬರುತ್ತಿವೆ. ಬೆಳೆ ವಿಮೆ ಪಾವತಿಯಾಗುವ ಸಂದರ್ಭದಲ್ಲಿ ಕರೆಗಳ ಸಂಖ್ಯೆ 600ರಿಂದ

ಮುಖ್ಯಾಂಶಗಳು

- ನೂತನ ತಂತ್ರಜ್ಞಾನಗಳ ಅಳವಡಿಕೆ
- ಕಾರ್ಯನಿರ್ವಹಣೆ ಅವಧಿ ವಿಸ್ತರಣೆ ಸಾಧ್ಯತೆ
- ತ್ವರಿತವಾಗಿ ಮಾಹಿತಿ ನೀಡಲು ಅನುಕೂಲ

700ರವರೆಗೂ ಏರಿಕೆಯಾಗುತ್ತದೆ ಎನ್ನುತ್ತಾರೆ ಕೃಷಿ ಇಲಾಖೆ ಅಧಿಕಾರಿಗಳು.

ಬೆಳೆ ಸಮೀಕ್ಷೆ, ಪಿಎಂ ಕಿಸಾನ್ ಯೋಜನೆ, ಬಿತ್ತನೆ, ಮಳೆ, ಹವಾಮಾನ, ರೋಗ-ಕೀಟ ಬಾಧೆ.. ಹೀಗೆ ವಿವಿಧ ವಿಭಾಗಗಳಿಗೆ ಸಂಬಂಧಿಸಿದ ಪ್ರಶ್ನೆಗಳು ಕೇಂದ್ರಕ್ಕೆ ಬರುತ್ತಿದೆ. ಸಿಬ್ಬಂದಿ ಬಹುತೇಕ ಪ್ರಶ್ನೆಗಳಿಗೆ ಉತ್ತರಿಸುವ ಜೊತೆಗೆ, ಅಗತ್ಯ ವಿದ್ದಾಗ, ತಜ್ಞರು, ಇಲಾಖೆ ಅಧಿಕಾರಿಗಳ ಸಂಪರ್ಕವನ್ನೂ ನೀಡುತ್ತಿದ್ದಾರೆ.

ನೂತನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವ ಮೂಲಕ 'ರೈತ ಕರೆ' ಕೇಂದ್ರದಲ್ಲಿ ಸುಧಾರಣೆ ತರುವ ಪ್ರಸ್ತಾವವಿದೆ. ರೈತರು ಯಾವ ಕ್ಷೇತ್ರದ ಬಗ್ಗೆ ಪ್ರಶ್ನೆ ಕೇಳುತ್ತಾರೋ, ಆ ವಿಭಾಗದ



ರೈತ ಕರೆ ಕೇಂದ್ರ

ತಜ್ಞರಿಗೆ ಸ್ವಯಂ ಚಾಲಿತವಾಗಿ ಸಂಪರ್ಕ ಕಲ್ಪಿಸಿ, ತಜ್ಞರಿಂದ ಮಾಹಿತಿ ಸಿಗುವಂತೆ ಮಾಡುವುದು ಈ ಯೋಜನೆಯ ಉದ್ದೇಶ. ಈ ಕುರಿತು ಕೃಷಿ ಇಲಾಖೆ ಅಧಿಕಾರಿಗಳು ವಿವಿಧ ಇಲಾಖೆಗಳ ಅಧಿಕಾರಿಗಳು, ವಿಷಯ ತಜ್ಞರು, ತಂತ್ರಜ್ಞಾನ ನಿಪುಣರ ಜತೆ ಸಮಾಲೋಚನೆ ನಡೆಸಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ' ಜೊತೆ ಮಾತನಾಡಿದ ಕೃಷಿ ಇಲಾಖೆ ನಿರ್ದೇಶಕ ಜೆ.ಟಿ. ಪುತ್ರ, 'ಭೂಮಿ, ಪ್ರೂಟ್ ಐಡಿ ಪೂರ್ವಲ್ಲನಂತಹ ಜಾಲತಾಣಗಳಿಂದ ದತ್ತಾಂಶಗಳು ಹಾಗೂ ಇ-ಸ್ಯಾಮ್ ನಂತಹ ತಂತ್ರಾಂಶಗಳನ್ನು ಬಳಸಿಕೊಂಡು, ಉನ್ನತ ತಂತ್ರಜ್ಞಾನಗಳ ನೆರವಿನೊಂದಿಗೆ ರೈತ ಕರೆ ಕೇಂದ್ರವನ್ನು ಉನ್ನತೀಕರಿಸುವ ಕೆಲಸ ನಡೆಯುತ್ತಿದೆ' ಎಂದು ವಿವರಿಸುತ್ತಾರೆ. 'ಬಿತ್ತನೆ ಆವಧಿ, ಬೆಳೆ ವಿಮೆ, ಕೂಪ್ಪು.. ಹೀಗೆ ಹಲವು ಮಾಹಿತಿಗಳನ್ನು ಪಡೆದಿದ್ದೇವೆ. ಬಹಳ ಕಾಂಪಯಾಕ್ಟ್ ಶಕ್ತಿಯಾವಾಣಿ ಇದು. ಹೆಚ್ಚು ಪ್ರಚಾರ ಮಾಡಿ, ಮತ್ತಷ್ಟು ತಿಳಿವಳಿಕೆ ಜಾಗೆ ಇನ್ನಷ್ಟು ರೈತ ಸ್ನೇಹಿಯಾಗಿಸಬೇಕು' ಎನ್ನುತ್ತಾರೆ ಕುಷ್ಟಗಿ ತಾಲ್ಲೂಕಿನ ಬಿಕ್ಕಳಿಕಿಯ ರೈತ ತಿವಣಗೌಡ.

ವರ್ಷ ಪೂರೈಸಿದ ಕೇಂದ್ರ

ಕೃಷಿ ಇಲಾಖೆಯ ವಿವಿಧ ವಿಭಾಗ ಗಳಲ್ಲಿದ್ದ ಎಲ್ಲ ಸಹಾಯವಾಣಿ ಕೇಂದ್ರಗಳನ್ನು ಒಗ್ಗೂಡಿಸಿ (18004253553) ಏಕೀಕೃತ, ಶುಲ್ಕ ರಹಿತ ದೂರವಾಣಿ ಸಂಖ್ಯೆಯನ್ನಾಗಿ ಪರಿವರ್ತಿಸಿ, 'ರೈತ ಕರೆ ಕೇಂದ್ರ' ವನ್ನು ಕಳೆದ ವರ್ಷದ ಆಗಸ್ಟ್‌ನಲ್ಲಿ ಆರಂಭಿಸಲಾಗಿದೆ.

17-09-2024
Prajavani Pg.II(2)